ಅಧ್ಯಕ್ಷರು:– ಈ question ಮೇಲಿನ ಚರ್ಚೆಯನ್ನು Close ಮಾಡಿದ್ದೇನೆ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಕೋಲಾರ ಜಿಲ್ಲೆ ಮಾಲೂರು ವಿಧಾನ ಸಭಾಕ್ಷೇತ್ರದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ ಅಂಶವಿರುವುದು

230 (3035) ಶ್ರೀ ಕೃಷ್ಣಯ್ಯಶೆಟ್ಟಿ ಎಸ್. ಎಸ್. (ಮಾಲೂರು) ಮಾನ್ಯ ಗ್ರಾಮೀಣಾ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆ ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ ಉಪಯೋಗಿಸುತ್ತಿರುವ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದರ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳೇನು;

ಇ) ಡೀ–ಫ್ಲೋರೈಡ್ ಕಿಟ್‌ಗಳನ್ನು ಆರೋಗ್ಯ ಇಲಾಖೆಯವರು ಸರಬರಾಜು ಮಾಡುತ್ತಿರುವುದು ನಿಜವೇ;

ಈ) ಹಾಗಿದ್ದರೆ, ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಕಿಟ್‌ಗಳನ್ನು ನೀಡಲಾಗಿದೆ; ಅವುಗಳನ್ನು ಉಪಯೋಗಿಸುತ್ತಿರುವ ಸ್ಥಳಗಳು ಯಾವುದು: ವಿವರ ನೀಡುವುದು?

ಶ್ರೀ ಬಿ. ಸತ್ಯನಾರಾಯಣ: (ಗ್ರಾಮೀಣಾ ನೀರು ಸರಬರಾಜು ರಾಜ್ಯ ಸಚಿವರು)

ಅ) ಬಂದಿದೆ.

ಆ) 1) ನೂಟವೆ, ಗುಂಡ್ಲಪಾಳ್ಯ ಮತ್ತು ಶೆಟ್ಟಿಹಳ್ಳಿಗಳಲ್ಲಿ ಡೀ–ಫ್ಲೋರಿಡೇಷನ್ ಘಟಕಗಳನ್ನು ಅಳವಡಿಸಲಾಗಿದೆ. 2) 836 ಗೃಹೋಪಯೋಗಿ ಡೀ–ಫ್ಲೋರಿಡೇಷನ್ ಫಿಲ್ಟರ್‌ಗಳನ್ನು ಫಲಾನುಭವಿ ವಂತಿಕೆಯನ್ನು ನೀಡುವ ಪ್ರತಿಯೊಂದು ಕುಟುಂಬಕ್ಕೂ ಪ್ರತ್ಯೇಕವಾಗಿ ಅಳವಡಿಸಲಾಗುತ್ತದೆ. (ರೂ.177.50/– ಬಿಪಿಎಲ್ ಮತ್ತು ರೂ.355/– ಎಪಿಎಲ್

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಎನ್. ಕೃಷ್ಣಯ್ಯ ಶೆಟ್ಟಿ:– ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ ಉಪಯೋಗಿಸುತ್ತಿರುವ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ನನ್ನ ಪ್ರಶ್ನೆಗೆ "ಅದು ಸರ್ಕಾರದ ಗಮನಕ್ಕೆ ಬಂದಿದೆ" ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇದು ಸಂತೋಷ ಪಡುವಂತಹ ವಿಷಯವಾಗಿದೆ. ಜಿಲ್ಲಾ ಪರಿಷತ್ತಿನ ತಾಂತ್ರಿಕ ವಿಭಾಗದಿಂದ ಮಾಡಲಾದ ಸಮೀಕ್ಷೆಯಲ್ಲಿ ಸುಮಾರು ನಾಲ್ಕು ವರ್ಷಗಳ ಹಿಂದೆಯೇ 33 ಹಳ್ಳಿಗಳಲ್ಲಿ ಫ್ಲೋರೈಡ್ ಅಂಶಗಳು ಕಂಡು ಬಂದಿದೆ ಎಂದು ಪತ್ತೆ ಹಚ್ಚಲಾಗಿದೆ. ಈ ಬಗೆಗಿನ ವರದಿಯನ್ನು ಸರ್ಕಾರಕ್ಕೂ ಸಲ್ಲಿಸಲಾಗಿದೆ. ಆದರೆ ಸರ್ಕಾರ ಕೇವಲ ಮೂರು ಹಳ್ಳಿಗಳಲ್ಲಿ ಮಾತ್ರ ಈ ಫ್ಲೋರೈಡ್ ಅಂಶವನ್ನು

ನಿವಾರಣೆ ಮಾಡಲಿಕ್ಕೆ ಬೇಕಾದಂತಹ ಘಟಕಗಳನ್ನು ಒದಗಿಸಿದ್ದಾರೆ. ಇನ್ನೂ 30 ಹಳ್ಳಿಗಳ ಕೊಳವೆ ಬಾವಿಗಳಿಗೆ ಯಾವುದೇ ಈ ಫ್ಲೋರೈಡ್ ನಿವಾರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿಲ್ಲದಿರುವುದು ನನಗೆ ಕಂಡು ಬಂದಿದೆ. ಏಕೆ ಇದರ ಬಗ್ಗೆ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳದೆ, ಪೂರ್ತಿ ಒದಗಿಸಿದ್ದೇವೆ ಎಂದು ತಿಳಿಸಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಯಾವಾಗ ಆ ಒಂದು ಘಟಕಗಳನ್ನು ಸ್ಥಾಪನೆ ಮಾಡಿ, ಈ 33 ಹಳ್ಳಿಗಳಲ್ಲಿರುವಂತಹ ಕೊಳವೆ ಬಾವಿಗಳ ಫ್ಲೋರೈಡ್ ಅಂಶವನ್ನು ತೆಗೆಯಲಿಕ್ಕೆ ನೀವು ಪ್ರಯತ್ನ ಪಡುತ್ತೀರಿ? ನಾಲ್ಕು ವರ್ಷದಿಂದ ಈಚೆಗೆ ಇನ್ನೂ ಸುಮಾರು 80 ಹಳ್ಳಿಗಳ ಕೊಳವೆ ಬಾವಿಗಳಲ್ಲಿ ಫ್ಲೋರೈಡ್ ಅಂಶ ಕಂಡು ಬಂದಿದೆ. ಈ ಒಂದು ಫ್ಲೋರೈಡ್‌ನಿಂದ ಜಾಂಡೀಸ್, ಪ್ಯಾರಲಿಸಿಸ್, ಕಾಲರಾ, ಬೋನ್ ಕ್ಯಾನ್ಸರ್, ಬೋನ್ ವೀಕ್‌ನೆಸ್ ಮುಂತಾದ ಬೇಕಾದಷ್ಟು ಖಾಯಿಲೆಗಳು ಬರುವಂಥಾದ್ದರ ಬಗ್ಗೆ ಡಾಕ್ಟರ್‌ಗಳಿಂದ ನಾನು ವರದಿಗಳನ್ನು ಪಡೆದುಕೊಂಡು ಬಂದಿದ್ದೇನೆ. ಈಗಾಗಲೇ ಈ ಫ್ಲೋರೈಡ್ ಅಂಶ ಹೆಚ್ಚಾಗಿರುವಂತಹ ಹಳ್ಳಿಗಳಲ್ಲಿ ಈ ತರಹದ ಖಾಯಿಲೆಗಳು ಹೆಚ್ಚಾಗಿ ನಮ್ಮ ತಾಲ್ಲೂಕಿನ ಜನತೆಯಲ್ಲಿ ಕಂಡು ಬರುತ್ತಿವೆ. ಸರ್ಕಾರ ಆದಷ್ಟು ಬೇಗ ಇದಕ್ಕೆ ಪರಿಹಾರ ಒದಗಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏತಕ್ಕಾಗಿ ಸರ್ಕಾರಕ್ಕೆ ತಪ್ಪು ಮಾಹಿತಿ ಒದಗಿಸಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಮತ್ತು ನೇರವಾಗಿ ಕೇಳಬೇಕು. ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಬಿ. ಸತ್ಯನಾರಾಯಣ:– ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಈ ಫ್ಲೋರೈಡ್ ಅಂಶ ಇರತಕ್ಕ ನೀರು ಸಿಗುತ್ತಿರುವುದು ನಿಜ. ಈಗಾಗಲೇ ಸರ್ಕಾರ ಅಲ್ಲಿಯ ಮೂರು ಹಳ್ಳಿಗಳಲ್ಲಿ ಒಂದು ಕೊಳವೆಯಿಂದ ನೀರು ಸರಬರಾಜು ಯೋಜನೆ, ಒಂದು ಕಿರು ನೀರು ಸರಬರಾಜು ಯೋಜನೆ, ಇನ್ನೊಂದು ಕೊಳವೆ ನೀರು ಸರಬರಾಜು ಯೋಜನೆಗೆ ತಲಾ ಒಂದು ಅಡ್‌ಸಾರ್ಪನ್ ಎಂಬ ತಂತ್ರಜ್ಞಾನದ ಡೀ–ಫ್ಲೋರಿಡೇಷನ್ ಘಟಕಗಳನ್ನು ಈಗಾಗಲೇ ಅಳವಡಿಸಿದ್ದೇವೆ. ಅದರ ಜೊತೆಗೆ 836 ಫಿಲ್ಟರ್‌ಗಳನ್ನು ಅಳವಡಿಸಿದ್ದೇವೆ. ಇನ್ನೂ ಹಲವಾರು ಹಳ್ಳಿಗಳಲ್ಲಿ ನಾವು ಮಾಡಬೇಕಾಗಿದೆ. ಇದರ ಜೊತೆಗೆ ಈ ನೀರಿನ ಗುಣಮಟ್ಟದ ಸಮಸ್ಯೆಗಳನ್ನು ಸರಿಪಡಿಸಲು ಬರೀ ಡೀ–ಫ್ಲೋರೈಡ್ ಮಾಡುವುದರೊಂದರಿಂದಲೇ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ನಾವು ಭೂಮಿಯ ಜಲ ಮೂಲಗಳನ್ನು ಭೂಮಿಯ ಮೇಲ್ಮೈ ನದಿ, ಕಾಲುವೆ, ಕೆರೆಗಳು ಇತ್ಯಾದಿ ನೀರು ಬಳಸಿ ಹಾಗೂ ದೂರದ ಸ್ಥಳಗಳಿಂದ ಬೋರ್‌ವೆಲ್ ಮುಖಾಂತರ ನೀರು ಕೊರೆಸಿ, ಆ ಒಂದು ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಕೃಷ್ಣಯ್ಯಶೆಟ್ಟಿ ಹೇಳಿದ್ದರ ಜೊತೆಗೆ, ಕೋಲಾರ ಜಿಲ್ಲೆಯಲ್ಲದೆ, ಉತ್ತರ ಕರ್ನಾಟಕದ ಕೊಪ್ಪಳ, ಗದಗ

ಮುಂಖಾದ ಇತರ ಭಾಗಗಳ ಜನತೆಗೂ ಇವತ್ತು ಈ ಫ್ಲೋರೋಸಿಸ್ ಖಾಯಿಲೆ ಬರುತ್ತಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ತಾವೇನಾದರೂ ವಿಶೇಷವಾದಂತಹ ಗಮನವನ್ನು ಕೊಡಬೇಕಾಗುತ್ತದೆ. ಇದೊಂದು ತರಹದ ಭಯಾನಕವಾದ ಖಾಯಿಲೆಯಾಗಿದೆ. ನಾವೇ ಶುದ್ಧವಾದ ನೀರು ಕೊಡದೇ, ಈ ಸಮಸ್ಯೆ ಉದ್ಭವವಾಗಿದೆ. ಇದನ್ನು ನಿವಾರಣೆ ಮಾಡಲಿಕ್ಕೆ ತಾವೇನಾದರೂ ಮಾಡುತ್ತೀರಾ? ನೀವು ಇದರ ಬಗ್ಗೆ ತಜ್ಞರನ್ನು ಕಳುಹಿಸಿ, ಪರೀಕ್ಷೆ ಮಾಡಿ. ಈ ನೀರನ್ನು ಕುಡಿದಂತಹವರ ಹಲ್ಲಿನ ಬಣ್ಣ ಹಳದಿಯಾಗುತ್ತಿದೆ, ಇಲ್ಲದ ರೋಗಕ್ಕೆ ಅವಕಾಶವಾಗುತ್ತಿದೆ. ಎಲ್ಲಾ ರೀತಿಯ ರೋಗಗಳಿಗೂ ಸಹ ಇದರಿಂದ ಅವಕಾಶವಾಗುತ್ತಿದೆ. ದಯಮಾಡಿ ಇದರ ನಿವಾರಣೆಗೆ ಪ್ರಯತ್ನಿಸಿ. ಒಂದು ಕಡೆಗೆ ಅವರಿಗೆ ಟ್ರೀಟ್‌ಮೆಂಟ್ ಕೊಡಿಸಿ, ಇನ್ನೊಂದು ಕಡೆ ಶುದ್ಧವಾದ ನೀರು ಕೊಡುವ ಕೆಲಸ ಮಾಡಿ. ವಿಶೇಷವಾದ ಆದ್ಯತೆಯನ್ನು ಕೊಟ್ಟು ಏನಾದರೂ ಒಂದು ಕಾರ್ಯಕ್ರಮವನ್ನು ತಾವು ಇದಕ್ಕಾಗಿ ರೂಪಿಸಬೇಕು. ಇದು ಕೋಲಾರ ಜಿಲ್ಲೆಯಲ್ಲಿ ಮಾತ್ರ ಇಲ್ಲ, ಬೇರೆಡೆಯೂ ಇದೆ.

ಶ್ರೀ ಬಿ. ಸತ್ಯನಾರಾಯಣ:– ರಾಜ್ಯದಲ್ಲಿ ಸುಮಾರು 27 ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯೇ ಫಸ್ಟ್ ಬರುತ್ತದೆ. ತುಮಕೂರು ಜಿಲ್ಲೆಯಲ್ಲಿ 658 ಜನವಸತಿಯ ಪ್ರದೇಶಗಳಲ್ಲಿ ಫ್ಲೋರೈಡ್ ಅಂಶ ಇರುವುದು ಕಂಡು ಬಂದಿದೆ. ಚಿತ್ರದುರ್ಗ ಎರಡನೇ ಸ್ಥಾನದಲ್ಲಿದೆ. ಅಲ್ಲಿ 519 ಇಂತಹ ಜನ ವಸತಿಗಳಿವೆ. ಕೋಲಾರ ಮೂರನೇ ಸ್ಥಾನದಲ್ಲಿದೆ. ಬೆಂಗಳೂರು (ಗ್ರಾಮಾಂತರ) ನಾಲ್ಕನೇ ಸ್ಥಾನದಲ್ಲಿದೆ. ಹೀಗೆ ರಾಜ್ಯದ ಸುಮಾರು 21,008 ಹಳ್ಳಿಗಳಲ್ಲಿ ಈ ಸಮಸ್ಯೆಯನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ಇದಕ್ಕೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಾನು ಈ ಖಾತೆ ವಹಿಸಿಕೊಂಡು ಕೇವಲ ಎರಡು ತಿಂಗಳಿಗಿಂತ ಸ್ವಲ್ಪ ಜಾಸ್ತಿ ದಿವಸವಾಗಿದೆ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಬಹುಮುಖ್ಯವಾಗಿ ನಾವು Surface water ಅನ್ನು ಮತ್ತು ಮಳೆ ನೀರನ್ನು ಸಂಗ್ರಹಣೆ ಮಾಡಿಕೊಳ್ಳುವಂತಹ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ಕೊಟ್ಟು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಖಾಯಿಲೆ ಬಂದಿರುವವರಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಏನಾದರೂ ವಿಶೇಷವಾದಂತಹ ಪ್ರಯತ್ನ ಆಗಿದೆಯೇ? ಅದು ನಿಮಗೆ ಸಂಬಂಧ ಇಲ್ಲ, ಅದು ಹೆಲ್ತ್ ಮಿನಿಸ್ಟರ್‌ಗೆ ಸಂಬಂಧಪಟ್ಟಿದ್ದಾಗಿದೆ. ನಿಮ್ಮ ಇಲಾಖೆಯಿಂದ ಇದರ ಬಗ್ಗೆ ಸೂಚನೆ ಕೊಟ್ಟು, ಈ ತರಹದ ಖಾಯಿಲೆಯಿಂದ ಬಳಲುತ್ತಿರುವವರಿಗೆ ಟ್ರೀಟ್‌ಮೆಂಟ್ ಕೊಡುವಂತಾದ್ದು, ತಕ್ಷಣ ಅವರನ್ನು ಖಾಯಿಲೆಯಿಂದ ಮುಕ್ತಿಗೊಳಿಸುವಂತಾದ್ದು ಆಗಬೇಕು.

ಡಾ: ಹೆಚ್. ಸಿ. ಮಹದೇವಪ್ಪ:– ಇದಕ್ಕೆ ಟ್ರೀಟ್‌ಮೆಂಟ್ ಅಂದರೆ ಅವರಿಗೆ ಬಿ–ಕಾಂಪ್ಲೆಕ್ಸ್ ಮತ್ತು ನ್ಯೂಟ್ರಿಷನ್ ಒದಗಿಸಿಕೊಡುವುದಾಗಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಫ್ಲೋರೈಡ್‌ನಿಂದ ಬರುವಂತಹ ಡಿಸೀಸ್‌ಗೆ ಯಾವುದೇ ಟ್ರೀಟ್‌ಮೆಂಟ್ ಇಲ್ಲ ಫ್ಲೋರೈಡ್ ಅನ್ನು ಅವಾಯ್ಡ್ ಮಾಡಬಹುದಷ್ಟೇ. ಫ್ಲೋರೈಡ್‌ನಿಂದ ಡಿಸೀಸ್ ಬಂದ ಮೇಲೆ ಅದಕ್ಕೆ ಯಾವುದೇ ಟ್ರೀಟ್‌ಮೆಂಟ್ ಇಲ್ಲ.

ಡಾ: ಹೆಚ್. ಸಿ. ಮಹದೇವಪ್ಪ:– ಮಾನ್ಯ ರೆಡ್ಡಿಯವರು ಹೇಳುವುದು ಕರೆಕ್ಟ್ ಫ್ಲೋರೈಡ್ ಅಂಶ 1.5 ಮಿಲಿ ಗ್ರಾಂಗಿಂತ ಹೆಚ್ಚು ಇದ್ದರೆ, permissible limitಗಿಂತ ಹೆಚ್ಚು ಇದ್ದರೆ, ಫ್ಲೋರೋಸಿಸ್ ಎಂದು ಕರೆಯುತ್ತಾರೆ. softening of bone tissues, ದೇಹದಲ್ಲಿ ಇರತಕ್ಕಂಥ ಮಾಂಸ ಮತ್ತು ಮೂಳೆಗಳು soften ಆಗಿ, ಮನುಷ್ಯ ಕ್ರಮೇಣವಾಗಿ ಮೊದಲು ಮಾಂಸದ ಮುದ್ದೆ ರೀತಿ ಆಗಿ ಹೋಗುತ್ತಾನೆ. ಅದನ್ನು ತಡೆಯಬೇಕೆಂದರೆ, ಡೀ–ಫ್ಲೋರಿಡೇಷನ್ ಮೆಕ್ಯಾನಿಸಂ ಒಂದು ಕಡೆ ಇದ್ದರೆ, ರಾಜೀವ್‌ಗಾಂಧಿ ಫೌಂಡೇಷನ್ ವಾಟರ್ ಮಿಷನ್‌ನಿಂದ ಡೀ–ಫ್ಲೋರೋಸಿಸ್ ಮಾಡಿ ವಾಟರ್ ಅನ್ನು ಕೊಡಬೇಕೆಂದಿದ್ದರೂ, ಇಲ್ಲಿ ಮನುಷ್ಯ ದೌರ್ಬಲ್ಯಕ್ಕೆ ಅಥವಾ ನಿಶ್ಯಕ್ತಿಗೆ ಒಳಗಾಗುವುದನ್ನು ತಡೆಯಲಿಕ್ಕೆ ಅವರಿಗೆ ನೂಟ್ರಿಷನ್ ಮತ್ತು ಬಿ–ಕಾಂಪ್ಲೆಕ್ಸ್ ವಿಟಮಿನ್ ಅನ್ನು ಕೊಡಬೇಕು. ಇದು ಟೆಂಪರರಿಯಾಯಿತು. ಇದರ ಜೊತೆಗೆ ಪರ್ಮನೆಂಟಾಗಿ surface water ಮತ್ತು rain water ಅನ್ನು alternative safe and permanent drinking water ಆಗಿ ಈ ಭಾಗಗಳಿಗೆ ಒದಗಿಸತಕ್ಕಂಥ ಒಂದು ಯೋಜನೆಯನ್ನು urban drinking water ಮತ್ತು rural drinking waterನ ಎರಡೂ ಅಧಿಕಾರಿಗಳು ಕುಳಿತು, 25–30% ಇದಕ್ಕೆ ಮಾಡಲಿಕ್ಕೆ ಒಂದು ಕ್ರಿಯಾ ಯೋಜನೆ ತಯಾರು ಮಾಡಬೇಕು. ನೀವು ಹೇಳುತ್ತೀರಲ್ಲಾ, ನದಿ ನೀರಿನಿಂದ ಚಾಮರಾಜನಗರಕ್ಕೆ ಕೊಡಿ ಎಂದು, ಆ ರೀತಿಯಲ್ಲಿ....

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ದಯವಿಟ್ಟು ಕ್ಷಮಿಸಬೇಕು. ಡೀ–ಫ್ಲೋರೈಡ್ ಪ್ಲಾಂಟೇಷನ್ಸ್, ಡೀ–ಫ್ಲೋರೈಡ್ ಫಿಲ್ಟರ್ಸ್ experiment ಮಾಡಿ ಅದನ್ನು manage ಮಾಡುವುದು ಕಷ್ಟವೆಂದು ಕಂಡು ಬಂದಿದೆ. ಡೀ–ಫ್ಲೋರೈಡ್ ಪ್ಲಾಂಟ್ಸ್ ಅನ್ನು maintain ಮಾಡುವುದೇ ಕಷ್ಟವಾದ್ದರಿಂದ ಅದೆಲ್ಲಾ failure ಆಗುತ್ತಿವೆ. ಫ್ಲೋರೈಡ್ ಅನ್ನು ಅವಾಯ್ಡ್ ಮಾಡಬೇಕಾದರೆ Surface water ಬಿಟ್ಟರೆ, ಮತ್ತೆ ಬೇರೆ ಏನೂ ದಾರಿಯಿಲ್ಲ There is no alternative.

ಶ್ರೀ ಎಸ್. ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ಬಹಳ ಗಂಭೀರವಾದಂತಹ ವಿಚಾರವಾಗಿದೆ. ನಾನು ಈ ಫ್ಲೋರೈಡ್ ಇದ್ದಂತಹ ಹಳ್ಳಿಯಿಂದ ಬಂದಂತಹವನಾಗಿದ್ದೇನೆ. ನಮ್ಮ ಗ್ರಾಮದಲ್ಲೇ ಅದು ಮೊದಲು ಪತ್ತೆಯಾಗಿ ನಂತರ ರಾಜ್ಯದ ತುಂಬಾ ಹರಡಿದ್ದು ಗೊತ್ತಾಯಿತು. ನನಗೂ ಕೂಡ ಫ್ಲೋರೈಡ್‌ನಿಂದಾಗಿ ಪರಿಣಾಮವಾಗಿದೆ. ಫ್ಲೋರೈಡ್ ಅಂಶ ಇರುವಂತಹ ನಮ್ಮಂತಹ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿದ್ದರು. ನಾಲ್ಕು ವರ್ಷಗಳ ಹಿಂದೆ ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕ 2–3 ಕೋಟಿ ರೂಪಾಯಿಗಳ ಆ ಯೋಜನೆ ಮಂಜೂರಾಗಿತ್ತು. ಅದಕ್ಕೆ 10% ಹಣವನ್ನು ಹಳ್ಳಿಯವರು

ತುಂಬಿ ಎಂದು ಹೇಳಿದ್ದರು, ಆದರೆ ಅದನ್ನು ತುಂಬಲಿಕ್ಕಾಗಲಿಲ್ಲ. ಇವತ್ತಿಗೂ ಆ ಯೋಜನೆ ಜಾರಿಗೆ ಬರದೆ ಟ್ರಕ್‌ನಲ್ಲಿ ನೀರನ್ನು ಒದಗಿಸುತ್ತಿದ್ದಾರೆ. ಹಿಂದಿನ ಮಂತ್ರಿಗಳು ಆ 10% ಹಣವನ್ನು ಬಿಟ್ಟಾದರೂ ನಾವು ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಅದನ್ನು ಇವತ್ತಿನವರೆಗೂ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಸಂಪೂರ್ಣವಾಗಿ ತಾವೇ ಹಣವನ್ನು ಒದಗಿಸಿಕೊಂಡು ಅಂತಹ ಹಳ್ಳಿಗಳಿಗೆ ನೀರನ್ನು ಒದಗಿಸುವ ಯೋಜನೆಯನ್ನು ಕಾರ್ಯಗತಗೊಳಿಸುವುದಾಗಿ ಹೇಳಬೇಕು ಎಂದು ಕೋರುತ್ತೇನೆ.

ಶ್ರೀ ಬಿ. ಸತ್ಯನಾರಾಯಣ:– ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಲ್ಲಿ ಆ ತರಹ ಒಂದು ಕಾಂಟ್ರಿಬ್ಯೂಷನ್

ಶ್ರೀ ಎಸ್. ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ರಾಜೀವ್‌ಗಾಂಧಿ ಟೆಕ್ನಾಲಜಿ ಮೆಷಿನ್‌ನಲ್ಲಿ ಕೂಡ ಹಾಗೆಯೇ ಹೇಳುತ್ತಿದ್ದೀರಿ. ಅದರಲ್ಲೂ ಕೂಡ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಮಗೆ ಉತ್ತರ ಕೊಟ್ಟಿದ್ದಾರೆ. ಇದು ಹಿಂದೆ ಆಗಿದೆ. ಮಂತ್ರಿಗಳು ಇಲ್ಲ ಯಾವುದೇ ಪರಿಸ್ಥಿತಿಯಲ್ಲಿ ನಾವು ಸರ್ಕಾರದಿಂದ ತುಂಬಿ ಮಾಡುತ್ತೇವೆ ಎಂದು ಉತ್ತರ ಕೊಟ್ಟಿದ್ದರು. ಆದರೆ ಇವತ್ತಿನವರೆಗೂ ಮಾಡಿಲ್ಲ ಹಿರೇಹಟ್ಟಿ ವಗೈರೆ ಹಳ್ಳಿಗಳಲ್ಲಿ ಈ ಯೋಜನೆ ಮಂಜೂರಾಗಿದೆ. ಸರ್ಕಾರದ ವತಿಯಿಂದ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಬಿ. ಸತ್ಯನಾರಾಯಣ:– ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಸ್. ಕೃಷ್ಣಯ್ಯಶೆಟ್ಟಿ:– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಸುಮಾರು ನಾಲ್ಕು ಸಾವಿರ ಜನ ಈ ಕಾಯಿಲೆಯಿಂದ ನರಳುತ್ತಿದ್ದಾರೆ. ಈ ಒಂದು ಪರಿಹಾರ ಕೊಡುವವರೆಗೆ, ಸರ್‌ಫೇಸ್ ವಾಟರ್ ಆಗಲಿ, ಬೇರೆ ನೀರಾಗಲಿ ಕೊಡುವವರೆಗೆ ಆಗುವ ಕಾಯಿಲೆಗಳಿಗೆ ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ? ಏಕೆಂದರೆ, ನಮ್ಮ ತಾಲ್ಲೂಕಿನಲ್ಲಿ ಇರುವ ಆಸ್ಪತ್ರೆಗಳಲ್ಲಿ ಒಂದು ಆಸ್ಪತ್ರೆಯಲ್ಲಿ ಕೂಡ ಎಕ್ಸರೇ ಮೆಷಿನ್ ಇಲ್ಲ, ಲ್ಯಾಬ್ ಇಲ್ಲ, ಬಹಳ ಹೀನ ಸ್ಥಿತಿಯಲ್ಲಿ ಇರುವ ಆಸ್ಪತ್ರೆಗಳು ನಮ್ಮ ತಾಲ್ಲೂಕಿನಲ್ಲಿ ಇವೆ. ಅಂತಹ ಕಾಯಿಲೆಗಳು ಬಂದಾಗ ಎಲ್ಲಿ ಆಸ್ಪತ್ರೆ ಕೊಡುತ್ತೀರಿ, ಎಲ್ಲಿ ಒಳ್ಳೆಯ ಚಿಕಿತ್ಸೆ ಕೊಡಿಸುತ್ತೀರಿ, ಬೇರೆ ನೀರು ಕೊಡುವವರೆಗೆ ಏನು ವ್ಯವಸ್ಥೆ ಮಾಡುತ್ತೀರಿ ಎಂದು ಮಾನ್ಯ ಸಚಿವರು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಬಿ. ಸತ್ಯನಾರಾಯಣ:– ಮಾನ್ಯ ಅಧ್ಯಕ್ಷರೆ, ಆರೋಗ್ಯ ಸಚಿವರ ಜೊತೆ ಚರ್ಚೆ ಮಾಡಿ ಸೂಕ್ತ ಔಷಧಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಮೈಸೂರು, ಬೆಂಗಳೂರು ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳನ್ನು ತುಂಬುವುದು

231(2781) ಶ್ರೀ ಎಸ್. ಎಲ್. ಧರ್ಮೇಗೌಡ (ಬೇರೂರು)ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು: ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು, ಬೆಂಗಳೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆ ಕಳೆದ 10 ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?